# ಆಹಾ ರಫೆಲ್ ಸೀರೆ!

ಸೀರೆ ಈಗ ಸಾಂಪ್ರದಾಯಿಕ ಉಡುಪು ಎಂಬ ಪಟ್ಟಕ್ಕಷ್ಟೇ ಸೀಮಿತವಾಗಿಲ್ಲ. ಸೀರೆಗಳಲ್ಲಿ ಆಶ್ಚರ್ಯವೆನಿಸುವಂತಹ ವಿನ್ಯಾಸಗಳು ಮಾರುಕಟ್ಟೆ ಪ್ರವೇಶಿಸಿವೆ. ಇವುಗಳಿಗೆ ಸೆಡ್ಡು ಹೊಡೆಯುವಂತಿದೆ 'ರಫಲ್ ಸೀರೆ'. ಇದು ರೆಟ್ರೊ ಶೈಲಿಯನ್ನು ನೆನಪಿಸುವಂತಿದೆ. ಶಿಲ್ಪಾ ಶೆಟ್ಟಿ, ಸೋನಂ ಕಪೂರ್ ಸೇರಿದಂತೆ ಹಲವು ಜನಪ್ರಿಯ ನಟಿಯರು ರಫಲ್ ಸೀರೆ ಉಟ್ಟು ಸಂಭ್ರಮಿಸಿದ್ದೂ ಇದೆ.

■ ವಿದ್ಯಾಶ್ರೀ ಎಸ್.



ಅತ್ತ ರಾಜಕೀಯದಲ್ಲಿ 'ರಫೆಲ್' ಸುದ್ದಿ ಮಾಡುತ್ತಿದ್ದರೆ ಇತ್ತ ಫ್ಯಾಷನ್ ಜಗತ್ತಿನಲ್ಲಿ 'ರಫಲ್' ಸೀರೆ ಸದ್ದು ಮಾಡುತ್ತಿದೆ. ಯುವತಿಯರ ಅಚ್ಚುಮೆಚ್ಚಿನ ಉಡುಪಾಗಿ ಹೊಸ ಟ್ರೆಂಡ್ ಅನ್ನೇ ಸೃಷ್ಟಿ ಮಾಡಿದೆ.

ಹೆಣ್ಮಕ್ಕಳ ಮನದೊಳಗೆ ಸೀರೆಗಳ ಸಡಗರ ಸದಾ ರಿಂಗಣಿಸುತ್ತಲೇ ಇರುತ್ತದೆ. ಎಲ್ಲಾ ಕಾಲಘಟ್ಟಕ್ಕೂ ಹೊಂದಿಕೊಳ್ಳುವ ಸ್ವರೂಪವನ್ನು ಸೀರೆ ಹೊಂದಿರುವ ಕಾರಣಕ್ಕೆ ಎಲ್ಲಾ ವಯೋಮಾನದ ಲಲನೆಯರನ್ನು ಇದು ಸೆಳೆಯಲು ಯಶಸ್ವಿಯಾಗಿದೆ.

ಸೀರೆ ಈಗ ಸಾಂಪ್ರದಾಯಿಕ ಉಡುಪು ಎಂಬ ಪಟ್ಟಕ್ಕಷ್ಟೇ ಸೀಮಿತವಾಗಿರದೆ, ಆಶ್ಚರ್ಯವೆನಿಸುವಂತಹ ವಿನ್ಯಾಸಗಳು ಮಾರುಕಟ್ಟೆ ಪ್ರವೇಶಿಸಿವೆ. ಇವುಗಳಿಗೆ ಸೆಡ್ಡು ಹೊಡೆಯುವಂತಿದೆ 'ರಫಲ್ ಸೀರೆ'.

ಇದು ಆಧುನಿಕ ಮೆರುಗನ್ನು ನೀಡಿ ನಿಮ್ಮನ್ನು ಅಂದಗಾಣಿಸುವುದರಲ್ಲಿ ಸಂಶಯವಿಲ್ಲ. ಸದಾ ಹೊಸತನ್ನೇ ಹುಡುಕುವ ಯುವತಿಯರು ಸೀರೆಗಳಲ್ಲಿ ಇನ್ನೇನೋ ಹೊಸತನ್ನು ಬಯಸುತ್ತಾರೆ. ಅದಕ್ಕೆ ತಕ್ಕಂತೆ ಹೊಸ ಹೊಸ ಪ್ರಯೋಗಗಳೂ ನಡೆಯುತ್ತವೆ. ಹೀಗೆ ನವೀನ ಬಗೆಯ ಸೀರೆಗಳಲ್ಲಿ 'ರಫಲ್' ಮುಂಚೂಣಿಯಲ್ಲಿದೆ.

ಸೀರೆಗೆ ನೆರಿಗೆ ಜೋಡಿಸುವುದು ಒಂಥರಾ ಕಸರತ್ತು. ಎಳೆಎಳೆಯಾಗಿ ಹರಡುವ ನೆರಿಗೆಯೇ ಸೀರೆಯ ಅಂದವನ್ನು ಹೆಚ್ಚಿಸುವುದು. ಈ ನೆರಿಗೆಯ ಜೊತೆಗೆ ಸೀರೆಯ ಅಂಚು ಮತ್ತು ಮಂಡಿಯಿಂದ ಪಾದದವರೆಗೂ ನೆರಿಗೆ ಇರುವುದು ಈ ಬಗೆಯ ಸೀರೆಯ ಶೈಲಿ.

ರಫಲ್ ಸೃಷ್ಟಿಗೆ ದಶಕಗಳ ಇತಿಹಾಸವಿದೆ. ಈ ಸೀರೆ ರೆಟ್ರೊ ಶೈಲಿಯನ್ನು ನೆನಪಿಸುತ್ತದೆ. ಫ್ಯಾಷನ್ ಜಗತ್ತಿನಲ್ಲಿ ಕ್ಷಣಕ್ಷಣಕ್ಕೂ ಹೊಸತನ ಸೃಷ್ಟಿಸುವ ವಿನ್ಯಾಸಕಾರರ ಕಣ್ಣು ಸದ್ಯಕ್ಕೆ ಬಿದ್ದಿರುವುದು ಹಳೆತನ್ನೇ ಹೊಸದಾಗಿಸುವ ಬಗೆಯಲ್ಲಿ. ಇದು ಪಾಶ್ಚಾತ್ಯ ವಿನ್ಯಾಸದ ದಿರಿಸಿನಲ್ಲಿ 50ರ ದಶಕದಲ್ಲಿಯೇ ಸ್ಥಾನ ಗಳಿಸಿತ್ತು. 1975ರ 'ದಿ ಸ್ಟೆಪ್‌ಫಾರ್ಡ್ ಲೈಫ್' ಸಿನಿಮಾದಲ್ಲಿ ರಫಲ್ ಉಡುಪಿನ ಚೆಲುವು ಮೇಳೈಸಿತ್ತು. ತಲೆಗೊಂದು ಟೋಪಿ, ಪದರ ಪದರವಾಗಿರುವ ರಫಲ್ ಉಡುಪಿನಲ್ಲಿ ಮಿಂಚಿದ್ದರು ಈ ಸಿನಿಮಾದ ಏಳು ನಟಿಯರು. ಅಲ್ಲಿಂದ ಈ ದಿರಿಸಿಗೆ ಹೆಚ್ಚಿನ ಪ್ರಚಾರ ದೊರಕಿತು.

ಈ ವಿಭಿನ್ನ ದಿರಿಸುಗಳು ಈಗಾಗಲೇ ಹಿಂದಿ ಧಾರಾವಾಹಿ ಲೋಕದಲ್ಲಿ ನಟಿಮಣಿಯರನ್ನು ಅಲಂಕರಿಸಿ ನೋಡುಗರ ಹುಬ್ಬೇರುವಂತೆ ಮಾಡಿವೆ. ಶಿಲ್ಪಾ ಶೆಟ್ಟಿ, ಸೋನಂ ಕಪೂರ್ ಸೇರಿದಂತೆ ಹಲವು ಜನಪ್ರಿಯ ನಟಿಯರು ರಫಲ್ ಸೀರೆ ಉಟ್ಟು ಇದರ ಜನಪ್ರಿಯತೆಯನ್ನು ಇನ್ನಷ್ಟು ಹೆಚ್ಚಿಸಿದ್ದಾರೆ.

ರವಿಕೆ, ಚೂಡಿದಾರ, ಗೌನ್, ಪಾಶ್ಚಾತ್ಯ ದಿರಿಸುಗಳಲ್ಲಿಯೂ 'ರಫಲ್'